**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ಕಾರಾಗೃಹ ಇಲಾಖೆಯ ಕಾರ್ಯ ನಿರ್ವಾಹಕ ಸಿಬ್ಬಂದಿಗಳಿಗೆ ಹಾಲಿಯಿರುವ ಉಚಿತ ಪಡಿತರ ಬದಲಾಗಿ ಮಾಸಿಕ ಭತ್ಯೆ ನೀಡುವ ಬಗ್ಗೆ.

ಓದಲಾಗಿದೆ:- 1. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು ಇವರ ಪತ್ರ ದಿನಾಂಕ: 21/9/2017.

2. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 104 ಪಿಆರ್‌ಇ 2010, ದಿನಾಂಕ:5/3/2014.

ಪ್ರಸ್ತಾವನೆ:-

1. ಮೇಲೆ ಓದಲಾದ (1)ರ ಪತ್ರದಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು ಇವರು ಕಾರಾಗೃಹ ಇಲಾಖೆಯ ಕಾರ್ಯ ನಿರ್ವಾಹಕ ಸಿಬ್ಬಂದಿಗಳಿಗೆ ಹಾಲಿಯಿರುವ ಉಚಿತ ಪಡಿತರ ಬದಲಾಗಿ ಮಾಸಿಕ ಭತ್ಯೆ ನೀಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ಕಾರಾಗೃಹ ಇಲಾಖೆಯ 1684 ಸಿಬ್ಬಂದಿಗಳಿಗೆ ಸಾರ್ವಜನಿಕ ವಿತರಣಾ ಪದ್ಧತಿಯಡಿ ಪ್ರತಿ ಕಾರ್ಡಿಗೆ ಪ್ರತಿ ಮಾಹೆಗೆ 15 ಕೆ.ಜಿ ಅಕ್ಕಿ ಮತ್ತು 3 ಕೆ.ಜಿ ಗೋಧಿ ಉಚಿತ ಪಡಿತರ ವಿತರಣೆಗೆ ಮೇಲೆ ಓದಲಾದ (2)ರ ಆದೇಶದಲ್ಲಿ ಮಂಜೂರಾತಿ ನೀಡಲಾಗಿರುತ್ತದೆ.

3. ದಾಸ್ತಾನು ಕೊರತೆ, ಅನುದಾನದ ಕೊರತೆ, ವಿತರಣೆಯ ವಿಳಂಬ ಮತ್ತು ಆಹಾರ ಧಾನ್ಯಗಳ ಗುಣಮಟ್ಟದ ಕೊರತೆ ಉಂಟಾಗುವುದರಿಂದ ಸಿಬ್ಬಂದಿಗಳಿಗೆ ನಿಗದಿತ ಅವಧಿಯೊಳಗೆ ಗುಣಮಟ್ಟದ ಪಡಿತರ ವಿತರಿಸಲು ಸಾಧ್ಯವಾಗದ ಕಾರಣ ಅಲ್ಲದೆ ಮಾಸಿಕ ಭತ್ಯೆ ರೂಪದಲ್ಲಿ ಪಡಿತರ ಮೊತ್ತವನ್ನು ನೀಡಿದಲ್ಲಿ ಪಡಿತರ ವಿತರಣೆಗೆಂದು ನಿಯೋಜಿಸಲಾಗುತ್ತಿರುವ ಕಾರ್ಯನಿರ್ವಾಹಕ ಸಿಬ್ಬಂದಿಗಳನ್ನು ಕಾರ್ಯನಿರ್ವಾಹಕ ಕರ್ತವ್ಯಕ್ಕೆ ನಿಯೋಜಿಸಿಕೊಳ್ಳಬಹುದಾದ ಕಾರಣಗಳಿಂದಾಗಿ ಪಡಿತರ ವ್ಯವಸ್ಥೆಯ ಬದಲಾಗಿ ಮಾಸಿಕ ರೂ.400/-ಗಳ ಭತ್ಯೆಯನ್ನು ಅವರ ವೇತನದಲ್ಲಿಯೇ ನೀಡುವ ಬಗ್ಗೆ ಮಂಜೂರಾತಿ ಕೋರಲಾಗಿರುತ್ತದೆ.

4. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 122 ಪಿಆರ್‌ಇ 2017**

**ಬೆಂಗಳೂರು, ದಿನಾಂಕ: 31.1.2018**

1.2.2018

A.D.G.P.
Prisons

4.1. ಕಾರಾಗೃಹ ಇಲಾಖೆಯ ಜೈಲರ್ ಹಾಗೂ ಅವರಿಗಿಂತ ಕೆಳಹಂತದ ಕಾರ್ಯನಿರ್ವಾಹಕ ಸಿಬ್ಬಂದಿಗಳಿಗೆ ಹಾಲಿಯಿರುವ ಉಚಿತ ಪಡಿತರದ ಬದಲಾಗಿ ದಿನಾಂಕ:1/4/2018ರಿಂದ ಜಾರಿಗೆ ಬರುವಂತೆ ಮಾಸಿಕ ಭತ್ಯೆ ರೂ.400/-ಗಳನ್ನು (ನಾಲ್ಕು ನೂರು ರೂಪಾಯಿಗಳು ಮಾತ್ರ) ಅವರ ವೇತನದಲ್ಲಿಯೇ ನೀಡಲು ಮಂಜೂರಾತಿ ನೀಡಿ ಆದೇಶಿಸಿದೆ.

4.2. ಪ್ರಸ್ತಾವನೆಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2056-00-101-0-01 ಸೆರೆಮನೆಗಳು 014 ಇತರೆ ವೆಚ್ಚಗಳ ಅಡಿ ಭರಿಸತಕ್ಕದ್ದು.

234
7/2

4.3. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ:31:ವೆಚ್ಚ-11:2018, ದಿನಾಂಕ:23/1/2018 ರಲ್ಲಿ ನೀಡಿರುವ ಸಹಮತದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

M. R. Shobha

(ಎಂ.ಆರ್.ಶೋಭಾ)
ಸರ್ಕಾರದ ಅಧೀನ ಕಾಯದರ್ಶಿ
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಗೆ:

1) ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು
2) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರು, ಶೇಷಾದ್ರಿ ರಸ್ತೆ, ಬೆಂಗಳೂರು.
3) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4) ಉಪ ನಿರ್ದೇಶಕರು, ಖಜಾನೆ ನಿರ್ವಹಣಾ ಗಣಕ ಯಂತ್ರ ಕೇಂದ್ರ, ಖನಿಜ ಭವನ, ಬೆಂಗಳೂರು.

ಪ್ರತಿ:

1) ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಕಾಸ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು (ಪಿಸಿಎಎಸ್)ಇವರ ಆಪ್ತ ಕಾರ್ಯದರ್ಶಿಯವರು, ಒಳಾಡಳಿತ ಇಲಾಖೆ.
3) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ಜಿಪಂ).
4) ಸರ್ಕಾರದ ಉಪ ಕಾರ್ಯದರ್ಶಿಗಳು(ಕಾನೂನು ಮತ್ತು ಸುವ್ಯವಸ್ಥೆ) ಇವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ.
5) ಸರ್ಕಾರದ ಅಧೀನ ಕಾರ್ಯದರ್ಶಿ (ಸಮನ್ವಯ), ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ